ಮನೋಲ್ಲಾಸ ಹೊಂದಲು ಅವರಿಗೆ ಇದು ಸಂಜೀವಿನಿಯಾಗಿದೆ.

ಕೇವಲ ಒಂದು ತಿಂಗಳ ಹಿಂದಷ್ಟೇ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ವೈಫಲ್ಯ ಅನುಭವಿಸಿದ್ದರು ಪಂತ್. ಈ ಸಲದ ಐಪಿಎಲ್‌ನಲ್ಲಿ ಅವರನ್ನು ದಾಖಲೆಯ ₹ 27 ಕೋಟಿ ಮೌಲ್ಯ ನೀಡಿದ್ದ ಲಖನೌ ಸೂಪರ್‌ಜೈಂಟ್ಸ್ ತಂಡವು ಖರೀದಿಸಿತ್ತು. ಅದರೊಂದಿಗೆ ಐಪಿಎಲ್ ಇತಿಹಾಸದ ಅತ್ಯಂತ ದುಬಾರಿ ಆಟಗಾರನಾಗಿದ್ದರು. ಅವರಿಗೆ ನಾಯಕ ಪಟ್ಟವನ್ನೂ ನೀಡಲಾಗಿತ್ತು. ಆದರೆ ತಂಡವು ಪ್ಲೇ ಆಫ್ ಪ್ರವೇಶಿಸಲಿಲ್ಲ. ಅವರ ಬ್ಯಾಟ್‌ನಿಂದ ರನ್‌ಗಳೂ ಹರಿಯಲಿಲ್ಲ. ಕೊನೆಯ ಲೀಗ್ ಪಂದ್ಯದಲ್ಲಿ ಶತಕ ಹೊಡೆದು ಲಾಗ ಹಾಕಿ ಸಂಭ್ರಮಿಸಿದ್ದರು. ಹೆಡಿಂಗ್ಲೆ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿಯೂ ಶತಕ ಹೊಡೆದು ಲಾಗ ಹಾಕಿ ಸಂತಸ ವ್ಯಕ್ತಪಡಿಸಿದ್ದರು.



ಹೋದ ವರ್ಷ ಆಸ್ಟ್ರೇಲಿಯಾ ಪ್ರವಾಸದಲ್ಲಿ ಅವರು ಸತತ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು. ಅದೊಂದು ಪಂದ್ಯದಲ್ಲಿ ರಿವರ್ಸ್ ಸ್ಕೂಪ್ ಆಡುವ ದುಸ್ಸಾಹಸ ಮಾಡಿ ವಿಕೆಟ್ ಕೊಟ್ಟಿದ್ದರು. ಆಗ ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ 'ಸ್ಟುಪಿಡ್...ಸ್ಟುಪಿಡ್...ಸ್ಟುಪಿಡ್...' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಪಂದ್ಯದ ಆ ಹಂತದಲ್ಲಿ ರಿಷಭ್ ಕಾಲೂರಿ ಆಡಿದ್ದರೆ ಭಾರತಕ್ಕೆ ಇನಿಂಗ್ಸ್ ಕಟ್ಟಲು ಸಹಕಾರಿಯಾಗುತ್ತಿತ್ತು. ರಿಷಭ್ ಒಬ್ಬರಿಗೇ ಆ ಸಾಮರ್ಥ್ಯವಿತ್ತು ಎಂಬ ಗಾವಸ್ಕರ್ ನಂಬುಗೆಯೇ ಆ ರೀತಿ ಆಕ್ರೋಶ ವ್ಯಕ್ತಪಡಿಸಲು ಕಾರಣವಾಗಿತ್ತು. ಹೆಡಿಂಗ್ಲೆಯಲ್ಲಿ ಪಂತ್ ಶತಕ ಹೊಡೆದಾಗ ಅದೇ ಗಾವಸ್ಕರ್ ಅವರು, 'ಸೂಪರ್ ಸೂಪರ್ ಸೂಪರ್' ಎಂದು ಬಾಯ್ತುಂಬ ಹೊಗಳಿದರು. ಎರಡನೇ ಇನಿಂಗ್ಸ್‌ನಲ್ಲಿ ಶತಕ ಹೊಡೆದಾಗ ಬಾಲ್ಕನಿಗೆ ಬಂದು ನಿಂತ ಗಾವಸ್ಕರ್ ಚಪ್ಪಾಳೆ ತಟ್ಟಿದರು. ಅಷ್ಟೇ ಅಲ್ಲ, 'ಕಾರ್ಟ್‌ವೀಲ್' ಮಾಡುವಂತೆ ಪಂತ್‌ಗೆ ಸಂಜ್ಞೆ ಮಾಡಿದರು. ತಾವು ಸುಸ್ತಾಗಿದ್ದರಿಂದ ಕಾರ್ಟ್‌ವೀಲ್ (ಲಾಗಾ) ಮಾಡಲಾಗದು ಎಂದು ಪಂತ್ ವಿನಮ್ರವಾಗಿಯೇ ಸಂಜ್ಞೆ ಮಾಡಿದ್ದರು. ಮುಂದಿನ ಬಾರಿ ಮಾಡುವುದಾಗಿಯೇ ಪ್ರಾಮಿಸ್ ಮಾಡಿದರು.

ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳಲ್ಲಿ ರಿಷಭ್ ಇಂತಹ ಇನಿಂಗ್ಸ್‌ಗಳನ್ನು ಬಹಳಷ್ಟು ಆಡಿದ್ದಾರೆ. ಅದರಲ್ಲೂ ಅವರು ಶತಕದಂಚಿನಲ್ಲಿ ಔಟಾಗಿದ್ದೇ ಹೆಚ್ಚು. ಆ ಇನಿಂಗ್ಸ್‌ಗಳು ನೋಡುಗರ ಮನಃಪಟಲದಲ್ಲಿ ಅಚ್ಚಾಗಿವೆ. ಆದರೆ ಅವೆಲ್ಲಕ್ಕಿಂತ ಹೆಚ್ಚಾಗಿ ಅವರ ಹಾಸ್ಯಮಿಶ್ರಿತ ಮಾತುಗಳು, ಸ್ನೇಹಪರ ಒಡನಾಟಗಳೇ ಆಪ್ತವಾಗುತ್ತವೆ.

2019ರಲ್ಲಿ ಆಸ್ಟ್ರೇಲಿಯಾದಲ್ಲಿ ಅವರು ಮಾಡಿದ್ದ ಕೀಟಲೆಯೊಂದು ಭಾರಿ ಜನಪ್ರಿಯವಾಯಿತು. ಆಸ್ಟ್ರೇಲಿಯಾ ತಂಡದ ಆಗಿನ ನಾಯಕ ಟಿಮ್ ಪೇನ್ ಅವರು ರಿಷಭ್ ಅವರನ್ನು 'ಬೇಬಿ ಸಿಟ್ಟರ್' ಎಂದರೆ ಮಕ್ಕಳ ಪಾಲಕ ಎಂದು ಕೀಟಲೆ ಮಾಡಿದ್ದರು. ಆದರೆ ರಿಷಭ್ ಇದನ್ನು ಅಷ್ಟಕ್ಕೆ ಬಿಡಲಿಲ್ಲ. ಪಂದ್ಯದುದ್ದಕ್ಕೂ ಟಿಮ್ ಪೇನ್ ಕಾಲೆಳೆದರು. ಅಷ್ಟೇ ಅಲ್ಲ. ಪಂದ್ಯದ ನಂತರ ಕಾರ್ಯಕ್ರಮವೊಂದರಲ್ಲಿ ಟಿಮ್ ಪೇನ್ ಮಕ್ಕಳೊಂದಿಗೆ ಚಿತ್ರ ತೆಗೆಸಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹಾಕಿಕೊಂಡರು. ಪೇನ್ ಅವರ ಪತ್ನಿ ಇದಕ್ಕೆ 'ಪರ್ಫೆಕ್ಟ್ ಬೇಬಿ ಸಿಟ್ಟರ್' ಎಂದು ಬರೆದಿದ್ದರು. ಅಲ್ಲಿಂದ ಇಲ್ಲಿಯವರೆಗೆ ಟಿಮ್ ಪೇನ್ ಕುಟುಂಬಕ್ಕೆ ಪಂತ್ ಎಂದರೆ ಅಚ್ಚುಮೆಚ್ಚಿನ ಸ್ನೇಹಿತ. ಅವರಷ್ಟೇ ಅಲ್ಲ. ಮಾಲ್‌ಗಳಲ್ಲಿ, ಹೋಟೆಲ್‌ಗಳಲ್ಲಿ ಮಕ್ಕಳೊಂದಿಗೆ ಮಗುವಾಗಿ ಆಡುವ ಪಂತ್ ಅವರ ವಿಡಿಯೊಗಳು ಸಾಕಷ್ಟಿವೆ.

ಭಾರತ ತಂಡಕ್ಕೆ ಪದಾರ್ಪಣೆ ಮಾಡಿ ಏಳು ವರ್ಷಗಳಾದರೂ ಪಂತ್ ಸ್ವಭಾವ ಬದಲಾಗಿಲ್ಲ. ಆಟದಲ್ಲಿ ಮಾಗಿರಬಹುದು. ಆದರೆ ಸದಾ ಹಸನ್ಮುಖಿಯಾಗಿ ಎಲ್ಲರೊಂದಿಗೆ ಕೀಟಲೆ ಮಾಡುತ್ತ ಇರುವ ಪಂತ್ ಹಿಂದೆ ಹತ್ತಾರು ಕಹಿ ಘಟನೆಗಳೂ ಇವೆ.

2022ರಲ್ಲಿ ತಮ್ಮ ವೃತ್ತಿಜೀವನದ ಉತ್ತುಂಗದಲ್ಲಿದ್ದ ರಿಷಭ್ ಪಂತ್ ಭೀಕರ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದರು. ತಮ್ಮ ತವರು ರಾಜ್ಯ ಉತ್ತರಾಖಂಡಕ್ಕೆ ಹೋಗುವ ಮಾರ್ಗದಲ್ಲಿ ಕಾರು ಅಪಘಾತವಾಗಿತ್ತು. ಕಾಲುಗಳ ಮೂಳೆಗಳು ತುಂಡಾಗಿದ್ದವು. ತಲೆ, ಬೆನ್ನು, ಹೊಟ್ಟೆಗೆ ಬಲವಾದ ಪೆಟ್ಟು ಬಿದ್ದಿದ್ದವು. ಪಂತ್ ಕ್ರಿಕೆಟ್ ಜೀವನ ಮುಗಿಯಿತು ಎಂದೇ ಹೇಳಲಾಗಿತ್ತು. ಆದರೆ ಬದುಕುಳಿದರು. ಸುಮಾರು ಎರಡು ವರ್ಷ ಕ್ರಿಕೆಟ್‌ನಿಂದ ದೂರವಿದ್ದರು. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪುನಶ್ಚೇತನಕ್ಕೆ ಬಂದಾಗಲೂ ಕೈಯಲ್ಲಿ ಊರುಗೋಲು ಇತ್ತು. ದೇಹ ತೂಕ ವಿಪರೀತ ಏರಿತ್ತು. ಆದರೆ ಮುಖದಲ್ಲಿಯ ನಗು ಮತ್ತು ಕಣ್ಣುಗಳಲ್ಲಿ ತುಂಟತನದ ಹೊಳಪು ಹಾಗೆಯೇ ಇತ್ತು. ಕಡೆಗೂ ಅವರ ಛಲವೇ ಗೆದ್ದಿತು. 2024ರ ಐಪಿಎಲ್‌ಗೆ ಮರಳಿದರು. ಈ ವರ್ಷವಂತೂ ಅವರು ಶತಕಗಳನ್ನು ಹೊಡೆದು ಸಮರ್‌ಸಾಲ್ಟ್ ಹಾಕುವ ಮಟ್ಟಕ್ಕೆ ಗಟ್ಟಿಯಾಗಿದ್ದಾರೆ.

ಬಾಲ್ಯದಲ್ಲಿ ಕಲಿತಿದ್ದ ಜಿಮ್ನಾಸ್ಟಿಕ್ಸ್ ಪಟ್ಟುಗಳನ್ನು ಅವರು ಮರೆತಿಲ್ಲ. ಕ್ರಿಕೆಟಿಗನಾಗಲು ಮನೆ ಬಿಟ್ಟು ದೆಹಲಿ ನಗರಿಗೆ ಬಂದಾಗ ಅನುಭವಿಸಿದ್ದ ಕಷ್ಟಗಳನ್ನೂ ಮರೆತಿಲ್ಲ. ರಾತ್ರಿ ಮಲಗಲು ಮತ್ತು ಊಟಕ್ಕಾಗಿ ಗುರುದ್ವಾರವೊಂದನ್ನು ಆಶ್ರಯಿಸಿದ್ದ ಹುಡುಗ ರಿಷಭ್. ಅದೆಷ್ಟೋ ಸಲ ಉಪವಾಸ ಮಲಗಿ ಬೆಳಗೆದ್ದು ಅಭ್ಯಾಸಕ್ಕೆ ತೆರಳಿದ್ದೂ ಇದೆ. ನೀರು ಕುಡಿದು ಹೊಟ್ಟೆ ತುಂಬಿಸಿಕೊಂಡರೂ ತುಂಟಾಟಕ್ಕೆ ಬರವಿರಲಿಲ್ಲ. ಇವತ್ತು ರಿಷಭ್ ಅವರನ್ನು ಗಟ್ಟಿಯಾಗಿಟ್ಟಿರುವುದೇ ಬಹುಶಃ ಆ ಸ್ವಭಾವವೇ ಇರಬೇಕು.

ಕೆಲವು ವರ್ಷಗಳ ಹಿಂದೆ ಐಪಿಎಲ್ ನಡೆದಿದ್ದ ಸಂದರ್ಭದಲ್ಲಿ ರಿಷಭ್ ಅವರ ತಂದೆ ನಿಧನರಾದರು. ಅಂತಿಮ ಸಂಸ್ಕಾರ ಮುಗಿಸಿದ ಮರುದಿನವೇ ಬೆಂಗಳೂರಿನಲ್ಲಿ ನಡೆದ ಪಂದ್ಯಕ್ಕೆ ರಿಷಭ್ ಹಾಜರಾಗಿದ್ದರು. ಡೆಲ್ಲಿ ಕ್ಯಾಪಿಟಲ್ಸ್ ತಂಡದ ಪರವಾಗಿ ಅರ್ಧ ಶತಕ ಬಾರಿಸಿದ್ದರು. ಜೀವನದ ಕಷ್ಟಗಳು, ತುಂಟಾಟ, ನಲಿದಾಟ ಏನೇ ಇರಲಿ ಆಟಕ್ಕೆ ಅವರ ಬದ್ಧತೆ ಎಂದೂ ಕಡಿಮೆಯಾಗಲಿಲ್ಲ.

ಅದಕ್ಕಾಗಿಯೇ ಅವರು 44 ಟೆಸ್ಟ್‌ಗಳಲ್ಲಿ 3200 ರನ್ ಹರಿಸಿದ್ದಾರೆ. ಅದರಲ್ಲಿ 8 ಶತಕಗಳು, 15 ಅರ್ಧ ಶತಕಗಳು ಅವರ ಯಶೋಗಾಥೆಯ ದ್ಯೋತಕಗಳಾಗಿವೆ. ಮಹೇಂದ್ರಸಿಂಗ್ ಧೋನಿಯ ವಾರಸುದಾರನಾಗಿ ವಿಕೆಟ್‌ಕೀಪಿಂಗ್ ಹೊಣೆ ಹೊತ್ತಿರುವ ಪಂತ್ ಈಗಾಗಲೇ 152 ಕ್ಯಾಚ್ ಮತ್ತು 15 ಸ್ಟಂಪಿಂಗ್‌ಗಳನ್ನು ತಮ್ಮ ಖಾತೆಗೆ ಸೇರಿಸಿಕೊಂಡಿದ್ದಾರೆ. ಏಕದಿನ ಮತ್ತು ಟಿ20 ಕ್ರಿಕೆಟ್‌ನಲ್ಲಿಯೂ ಅವರ ಸಾಧನೆ ಕಮ್ಮಿಯೇನಿಲ್ಲ. ■